

ಬಣ್ಣಗೆಟ್ಟಿರುವ ಡವ್‌ಕೋಟ್



ನಿಜಕ್ಕೂ ಅದ್ಭುತವೇ ಸರಿ.

ಅದು ಸುಮಾರು ಮೂರು ಅಡಿ ಎತ್ತರದ ಜಗತಿಯ ಮೇಲೆ ನಿಂತಿರುವ 70 ಅಡಿಗೂ ಹೆಚ್ಚು ಎತ್ತರದ ಬೃಹತ್ ಗುಮ್ಮಟ. ಅಕ್ಷರಶಃ ಲಕ್ವ ಹೊಡೆದ ವ್ಯಕ್ತಿಯ ಸ್ಥಿತಿ ಈ ಸ್ಮಾರಕದ್ದು. ಈ ಗುಮ್ಮಟದ ಒಂದು ಪಾರ್ಶ್ವ ಕುಸಿದು ಬಿದ್ದಿದೆ. ಮತ್ತೊಂದು ಮಗ್ಗುಲು ಕೂಡ ಬಿರುಕು ಬಿಟ್ಟಿದೆ. 5 ದ್ವಾರಗಳ ಈ ಗುಂಬಸ್ ಒಳಗಿರುವ ಎರಡು ಸಮಾಧಿಗಳು ಹಕ್ಕಿಗಳ ಹಿಕ್ಕೆಯಿಂದ ಭಾಗಶಃ ಮುಚ್ಚಿ ಹೋಗಿವೆ. ಗುಮ್ಮಟದ ಮೇಲೆ ಬೆಳೆದ ವಿವಿಧ ಗಿಡಗಳ ಬೇರುಗಳು ತಳಗುಂಟ ಇಳಿ ಬಿದ್ದು ಸ್ಮಾರಕವನ್ನು ಉರುಳಿಸಲು ಹವಣಿಸುತ್ತಿರುವಂತೆ ತೋರಿತು. ಒಳಾವರಣದಲ್ಲಿ ಮಸಿ ಮೆತ್ತಿಕೊಂಡಿರುವುದು, ಕುಸುರಿ ಕಲೆಗಳು ಮುಕ್ಕಾಗಿರುವುದು ಮರುಕ ಹುಟ್ಟಿಸಿತು.

'ಲಂಗ್ಡೆ ಗುಲಾಂ ಅಲಿಖಾನ್ ಹೆಸರು ಕೇಳಿದ್ದೀರಾ? ಟಿಪ್ಪು ಸುಲ್ತಾನ್ ಆಸ್ಥಾನದಲ್ಲಿ ಆತ ಮಂತ್ರಿಯಾಗಿದ್ದ. ನಂಬಿಕಸ್ಥ ಮಂತ್ರಿ ಎನಿಸಿಕೊಂಡಿದ್ದ ಗುಲಾಂ ಅಲಿಖಾನ್ ಫ್ರೆಂಚರು ಮತ್ತು ಟರ್ಕಿ ಸುಲ್ತಾನನ ಬಳಿ ಟಿಪ್ಪು ಪರ ರಾಯಬಾರ ಮಾಡಿದ್ದ. ಗುಲಾಂ ಅಲಿಖಾನ್ ಕುಂಟನಾಗಿದ್ದರಿಂದ ಆತ ಲಂಗ್ಡೆ ಗುಲಾಂ ಅಲಿಖಾನ್ ಎಂದೇ ಹೆಸರಾಗಿದ್ದ. ತನ್ನ ಮರಣದ ತರುವಾಯ ಇದೇ ಗುಮ್ಮಟದಲ್ಲಿ ತನ್ನನ್ನು ಮತ್ತು ತನ್ನ ಪತ್ನಿಯನ್ನು ಮಣ್ಣು ಮಾಡಬೇಕು ಎಂದು ಆತ ಕೇಳಿಕೊಂಡಿದ್ದನಂತೆ. ಆತನ ಬಂಧುಗಳು ಗುಲಾಂ ಅಲಿಖಾನ್‌ನ ಮಾತನ್ನು ನಡೆಸಿಕೊಟ್ಟರು' ಎಂದು ಕರಿಮುದ್ದೀನ್ ಹೇಳುತ್ತಾ ಹೋದರು.

'ಅದೆಲ್ಲ ಸರಿ ಸರ್, ಇಷ್ಟು ದೊಡ್ಡ ಸ್ಮಾರಕವನ್ನು ಏಕೆ ನಿರ್ಲಕ್ಷಿಸಿದ್ದಾರೆ' ಎಂದು ತಂಡದಲ್ಲಿದ್ದ ಜಯಶಂಕರ್ ಪ್ರಶ್ನೆ ಹಾಕಿದರು. 'ಅಯ್ಯೋ...ಅದಾ! ಟಿಪ್ಪು ಸುಲ್ತಾನ್ ನಿಷ್ಠಾವಂತ ಸುನ್ನಿ. ಆತನ ಬಳಿ ಇದ್ದ ಬಹುಪಾಲು ಮಂದಿ ಸುನ್ನಿ ಸಂಪ್ರದಾಯದವರೇ. ಆದರೆ ಗುಲಾಂ ಅಲಿಖಾನ್ ಷಿಯಾ ಪಂಗಡಕ್ಕೆ ಸೇರಿದ್ದ. ಇಸ್ಲಾಂ ಧರ್ಮದ ಈ ಎರಡೂ ಪಂಗಡಗಳ ಆಚಾರ ವಿಚಾರಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಷಿಯಾ ಪಂಗಡದ ಗುಲಾಂ ಅಲಿಖಾನ್ ನಿರ್ಮಿಸಿರುವ ಈ ಗುಂಬಸ್‌ಗೆ 5 ದ್ವಾರಗಳಿವೆ. ಇಂತಹ ರಚನೆಯನ್ನು ಸುನ್ನಿ ಪಂಗಡ ಒಪ್ಪುವುದಿಲ್ಲ. ಹಾಗಾಗಿ ಅವರು ಯಾರೂ ಇತ್ತ ತಲೆ ಹಾಕುವುದಿಲ್ಲ. ಪ್ರಾಚ್ಯವಸ್ತು ಇಲಾಖೆಗಳ ದಿವ್ಯ ನಿರ್ಲಕ್ಷ್ಯದಿಂದ ಈ ಸ್ಮಾರಕಕ್ಕೆ ಈ ದುಸ್ಥಿತಿ ಬಂದಿದೆ' ಎಂದರು ಪ್ರೊಫೆಸರ್.

ಮೈಸೂರಿನ ವ್ಯಕ್ತಿಯೊಬ್ಬರು ಗುಲಾಂ ಅಲಿಖಾನ್ ಗುಮ್ಮಟ (ಗುಂಬ್ಬಿ)ದ ಜತೆಗೆ ಅದರ ಆಸುಪಾಸಿನ ಜಾಗಕ್ಕೂ ಬೇಲಿ ಹಾಕಿಕೊಂಡಿದ್ದಾರೆ. 'ಸಾವ್ಕಾರರ ಅಪ್ಪಣೆ ಇಲ್ದೆ ಒಳಕ್ಕೆ ಬರುವಂಗಿಲ್ಲ' ಎಂದು ತೋಟ ಕಾಯುವ ರತ್ನಮ್ಮ ನಮಗೆ ಎಚ್ಚರಿಕೆಯ ಮಾತು ಹೇಳಿ ನಮ್ಮನ್ನು ಅಲ್ಲಿಂದ ಸಾಗಹಾಕಿದರು.

ನಮ್ಮ ಪಯಣ 'ಯೂರೋಪಿಯನ್ನರ ಸಮಾಧಿ'ಗಳ ಕಡೆ ಹೊರಟಿತು. ನಾಲ್ಕನೇ ಆಂಗ್ಲೋ– ಮೈಸೂರು ಯುದ್ಧದ ಬಳಿಕ ಬ್ರಿಟೀಷ್ ಸೇನೆಯ ಕರ್ನಲ್, ಕಮಾಂಡರ್ ಹಾಗೂ ಸೈನಿಕರು ತಮ್ಮ ಕುಟುಂಬ ಸದಸ್ಯರ ಜತೆ ಮೈಸೂರು ಮತ್ತು ಶ್ರೀರಂಗಪಟ್ಟಣದಲ್ಲಿ ನೆಲೆ ನಿಂತಿದ್ದರು. 1800ರಿಂದ 1860ರ ಅವಧಿಯಲ್ಲಿ ಅಸುನೀಗಿದ ಯೂರೋಪಿಯನ್ನರ ಮೃತ ದೇಹಗಳನ್ನು ಕಾವೇರಿ ನದಿ ದಡದಲ್ಲಿ ಹೂಳಲಾಗಿದೆ. ಹೀಗೆ ಮಣ್ಣು ಮಾಡಿದವರಿಗೆ ಸಮಾಧಿ ನಿರ್ಮಿಸಿದ್ದು, ಪ್ರತಿಯೊಂದರ ಮೇಲೂ ಅವರವರ ಹೆಸರು, ವಯಸ್ಸು ಮತ್ತು ಹುದ್ದೆಯ ವಿವರವನ್ನು ಇಂಗ್ಲಿಷ್ ಭಾಷೆಯ ಫಲಕದಲ್ಲಿ ಹಾಕಲಾಗಿದೆ. ಕೆಲವು ಸಮಾಧಿಗಳ ಮೇಲೆ ಅಮೃತ ಶಿಲೆಯ ಫಲಕಗಳೂ ಇವೆ. ಯೂರೋಪಿಯನ್ನರ ಈ ಸಮಾಧಿಗಳ ಗುಚ್ಛವನ್ನು 'ಗ್ಯಾರಿಸನ್ ಸೆಮಟರಿ' ಎಂದೇ ಕರೆಯಲಾಗುತ್ತದೆ.

ಇಲ್ಲಿ 250ಕ್ಕೂ ಹೆಚ್ಚು ಸಮಾಧಿಗಳಿದ್ದು ಒಂದೊಂದೂ ವಿಭಿನ್ನವಾಗಿವೆ. ಟಿಪ್ಪು ಸುಲ್ತಾನ್ ವಿರುದ್ಧ ಹೋರಾಡಿದ ಡಿ' ಮ್ಯೂರಾನ್ ಬೆಟಾಲಿಯನ್‌ನ ನಾಯಕ ಜಾನ್ ಡಿ' ಮ್ಯೂರಾನ್ ಕುಟುಂಬದ ಸದಸ್ಯರು 2008ರಲ್ಲಿ ಈ ಸಮಾಧಿಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಮೈಸೂರಿನ ಕೆಥೊಲಿಕ್ ಕ್ರೈಸ್ತ ಸಂಸ್ಥೆಯಿಂದ ಗ್ಯಾರಿಸನ್ ಸೆಮಟರಿಯ ಉಸ್ತುವಾರಿ ಹೊತ್ತಿದ್ದು, ಕಾವಲಿಗೆ ಮಹಿಳೆಯೊಬ್ಬರನ್ನು ನೇಮಿಸಿದೆ. 'ಇಲ್ಲಿಗೆ ಸುತ್ತಿ ಬಳಸಿ ಬರಬೇಕು. ರಸ್ತೆಯೂ ಸರಿಯಿಲ್ಲ. ಆಗಾಗ ಒಬ್ಬಿಬ್ಬರು ಬಂದು ಹೋಗುತ್ತಾರೆ ಅಷ್ಟೆ' ಎಂದು ಸೆಮಟರಿ ನೋಡಿಕೊಳ್ಳುವ ವಿದ್ಯಾಲಕ್ಷ್ಮೀ ಹೇಳಿದರು. ನೆತ್ತಿ ಸುಡುವ ಬಿಸಿಲು ನಮ್ಮನ್ನು ಸಾಕಷ್ಟು ಸುಸ್ತು ಮಾಡಿದ್ದರಿಂದ ಎಳನೀರು ಕುಡಿದು ನಮ್ಮ ನಮ್ಮ ದಾರಿ ನಾವು ಹಿಡಿದೆವು.